885. ದೊಡ್ಡಪ್ಪ ನಿಂ. ದುಂಡನಕೊಪ್ಪ, ಸಾ. ತಲ್ಲೂರ 7207
886. ಇಟ್ಟಪ್ಪ ಯ ಇಂಚಲ, ಸಾ. ಸತ್ತಿಗೇರಿ 7013
887. ಯಂಕವ್ವಾ ನಿಂ. ಮಹಾರಾಜನವರ, ಸಾ. ಸವದತ್ತಿ 2015
888. ರಾಯಪ್ಪ ಬಿ. ಎಲಿಗಾರ 6690
889. ನಿಂಗಪ್ಪಾ ಮ. ಕಾಳಗಿ, ಸಾ. ಸವದತ್ತಿ 7165
890. ಜಸಾವಿ ಎಂ. ನಾಯ್ಕರ್ 7304
891. ಲಕ್ಕವ್ವಾ ದ. ಕುಲಸಾಪುರ 7336
892. ಬಸಪ್ಪಾ ಅ. ಅಸುಂಡಿ 7334
893. ಅಡಿವಪ್ಪಾ ಆರ್. ಸೊಮಯ್ಯನ್ನವರ ಹಿರೇಕುಂದಿ 8492
894. ಅಡಿವಪ್ಪಾ ಬ. ಜಮನಾಳ, ಸಾ. ಸವದತ್ತಿ 7416
895. ರಾಚಯ್ಯ ಗ. ಹೊಂಗಲಮಠ, ಸಾ. ಸವದತ್ತಿ 7413
896. ಗಂಗವ್ವಾ ನಿಂ. ತಳವಾರ, ಸಾ. ಮಲ್ಲೂರ 7302
897. ಮೌಲಾಸಾಬ ಅ. ನದಾಫ್, ಸಾ. ಸವದತ್ತಿ 7305
898. ಎಸ್.ಕೆ. ಕಟ್ಟಿಮನಿ, ಸಾ. ಸವದತ್ತಿ 6693
899. ಲಚ್ಚಪ್ಪಾ ಲಮಾಣಿ, ಸಾ. ಕಟಮಚ್ಚಿ ತಾಂಡಾ 6244
900. ಗೌರವ್ವಾ ಮ. ಸಿದ್ದಾಪೂರ, ಸಾ. ಸವದತ್ತಿ 7110
901. ಶಂಕರಗೌಡ ಬ. ರಾಯನಗೌಡ್ರ, ಸಾ. ಚಿಕ್ಕಉಳ್ಳಗೇರಿ6480
902. ಗಂಗಪ್ಪಾ ಯಲ್ಲಪ್ಪಾ ಹಿರಿಯೂರ, ಸಾ.' ಬೆಟಸೂರ 6160
903. ಅಡಿವೆಪ್ಪಾ ಈ. ಹಬನಿ, ಸಾ. ಹೂಲಿ 7454
904. ಎಸ್.ಎಲ್. ಚಂದಾಪೂರ, ಸಾ. ಸವದತ್ತಿ 5522
905. ಇಬ್ರಾಂಬಸಾಬ ನಧಾಫ್ ಸತ್ತಿಗೇರಿ 6789
906. ಹುಸೇನಸಾಬ ಅ. ಭಾವಿಕಟ್ಟಿ, ಸಾ. ಮುನವಳ್ಳಿ 7647
907. ಬೀಸಾವಿ ಎಂ. ಮಲ್ಲಣ್ಣವಾರ, ಸಾ. ಸವದತ್ತಿ 7641
908. ಡಿ.ಎಫ್. ಮಕಾನದಾರ, ಸಾ. ತೇಗಿಹಾಳ 7649

ಸ್ವಾತಂತ್ರ್ಯ ಯೋಧರಿಗೆ ಕೆ.ಎಸ್.ಆರ್.ಟಿ.ಸಿ ಫ್ರೀ ಬಸ್ ಪಾಸ್.

970(1484) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದವರು ಸ್ವಾತಂತ್ರ್ಯ ಯೋಧರಿಗೆ ಯಾವ ಯಾವ ಸಹಾಯವನ್ನು ಕೊಡುತ್ತಿರುವರು ;

ಆ) ರಾಜ್ಯ ಸರ್ಕಾರದವರು ಈಗ ಕೊಡುತ್ತಿರುವ ಸಹಾಯವನ್ನು ಬಿಟ್ಟು ಇನ್ನೂ ಹೆಚ್ಚಿನ ಯಾವ ಯಾವ ಸೌಲತ್ತುಗಳನ್ನು ಕೊಡ ಬೇಕೆಂದು ತೀರ್ಮಾನಿಸಲಾಗಿದೆ ;

ಇ) ರಾಜ್ಯ ಸರ್ಕಾರದವರು, ಕೇಂದ್ರ ಸರ್ಕಾರದವರು ಸ್ವಾತಂತ್ರ್ಯ ಯೋಧರಿಗೆ ರೈಲ್ವೆ ಪಾಸನ್ನುಕೊಟ್ಟಿಂತೆ ಕೆ.ಎಸ್.ಆರ್ಟಿ.ಸಿ ಬಸ್‌ಗಳಲ್ಲಿ ಓಡಾಡಲು ಬಸ್ ಪಾಸನ್ನು ನೀಡಲಾಗುವುದೇ.

ಈ) ಆಶ್ರಯ ಇಲ್ಲದೆ ಇರುವ ಸ್ವಾತಂತ್ರ್ಯ ಯೋಧರಿಗೆ ವಾಸಿಸಲು ಸರ್ಕಾರದವರು ವ್ಯವಸ್ಥೆ ಮಾಡುವರೇ?

ಅ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಈ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಇ) ರಾಜ್ಯದಲ್ಲಿರುವ ಸ್ವಾತಂತ್ರ್ಯ ಯೋಧರು ವರ್ಷಕ್ಕೊಂದಾವರ್ತಿ ಕೆ.ಎಸ್.ಆರ್.ಟಿ.ಸಿ ಬಸ್‌ಗಳ ಮೂಲಕ ರಾಜ್ಯದ ಯಾವುದೇ ಎರಡು ಸ್ಥಳಗಳ ನಡುವೆ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯನ್ನು ಮಾರ್ಪಾಡು ಮಾಡುವ ಉದ್ದೇಶ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

ಈ) ಈ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಅನುಬಂಧ

(ಪ್ರಶ್ನೆ ಸಂಖ್ಯೆ 1484 ರ 'ಅ' ಭಾಗಕ್ಕೆ ಉತ್ತರ)

1. ಪ್ರವಾಸ ಸೌಲಭ್ಯಗಳು: ರೈಲ್ವೆ ಸೌಲಭ್ಯ: ರಾಜ್ಯ ಗೌರವ ಧನ ಪಡೆಯುವ ಸ್ವಾತಂತ್ರ್ಯ ಯೋಧರಿಗೆ ಅವರ ಜೀವಿತ ಅವಧಿಯಲ್ಲಿ ಒಂದು ಬಾರಿ ದ್ವಿತಿಯ ದರ್ಜೆ ರೈಲಿನಲ್ಲಿ ದೇಶದ ಯಾವುದೇ ಎರಡು ಸ್ಥಳಗಳ ನಡುವೆ ಉಚಿತ ಪ್ರವಾಸ ಸೌಲಭ್ಯವನ್ನು ಸರ್ಕಾರ ಕಲ್ಪಿಸಿದೆ.

ಬಸ್ ಸೌಲಭ್ಯ: ಅವರಿಗೆ ವರ್ಷಕ್ಕೆ ಒಂದು ಬಾರಿ ಕೆ.ಎಸ್.ಆರ್.ಟಿ.ಸಿ ಬಸ್‌ಗಳ ಮೂಲಕ ರಾಜ್ಯದ ಯಾವುದೇ ಎರಡು ಸ್ಥಳಗಳ ನಡುವೆ ಉಚಿತ ಪ್ರಯಾಣ ಸೌಲಭ್ಯವನ್ನು ಕಲ್ಪಿಸಿದೆ.

2. ವೈದ್ಯಕೀಯ ಸೌಲಭ್ಯ: ರೂ.3600-00ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಇರುವಂತಹ ರಾಜ್ಯ ಗೌರವ ಧನ ಅಥವಾ ಕೇಂದ್ರ ಗೌರವಧನ ಪಡೆಯುವ ಸ್ವಾತಂತ್ರ್ಯ ಯೋಧರಿಗೆ ಹಾಗೂ ಅವರ ಹೆಂಡತಿ ಅಥವಾ ಅಪ್ರಾಪ್ತ ವಯಸ್ಕ ಮಕ್ಕಳಿಗೆ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರಿಗೆ ನೀಡುವಂತೆ ಉಚಿತ ವೈದ್ಯಕೀಯ ಸೌಲಭ್ಯ ನೀಡಲಾಗುತ್ತಿದೆ. ಈ ಆದಾಯ ಮಿತಿಯನ್ನು ವಾರ್ಷಿಕ ರೂ.8000-00ಕ್ಕೆ ಹೆಚ್ಚಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.(ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯಲ್ಲಿ).

3. ಶಿಕ್ಷಣ ಸೌಲಭ್ಯ: ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ತಾಂತ್ರಿಕ ಶಿಕ್ಷಣದಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಹಲವು ಸ್ಥಾನಗಳನ್ನು ಕಾದಿರಿಸಲಾಗಿದೆ. ವಾರ್ಷಿಕ ರೂ.3600-00ಕ್ಕಿಂತ ಕಡಿಮೆ ಆದಾಯ ಇರುವ ಸ್ವಾತಂತ್ರ್ಯ ಯೋಧರ ವಕ್ಕಳು ಕಾಲೇಜುಗಳಲ್ಲಿ ಫ್ರಿಸ್ಕೂಡೆಂಟ್ ಶಿಪ್‌ಗೆ ಅರ್ಹರಾಗಿರುತ್ತಾರೆ.

4. ಭೂ ಮಂಜೂರಾತಿ: ಸರ್ಕಾರಿ ಜಮೀನಿನಲ್ಲಿ ಶೇ.10ರಷ್ಟು ಜಮೀನನ್ನು ಸ್ವಾತಂತ್ರ್ಯ ಯೋಧರಿಗೆ ಹಂಚಿಕೆ ಮಾಡುವಲ್ಲಿ ಕಾಯ್ದಿರಿಸಲಾಗಿದೆ.

5. ಅಂತ್ಯಕ್ರಿಯೆ ವೆಚ್ಚ: ರಾಜ್ಯ ಗೌರವಧನ: ಕೇಂದ್ರ ಗೌರವ ಧನ ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರು ನಿಧನಹೊಂದಿದರೆ ಅಂತಹವರ ಕುಟುಂಬಕ್ಕೆ ಸ್ವಾತಂತ್ರ್ಯ ಯೋಧರ ಅಂತ್ಯಕ್ರಿಯೆಗೆ ರಾಜ್ಯ ಸರ್ಕಾರದ ವತಿಯಿಂದ ರೂ.1000-00 ಧನ ಸಹಾಯವನ್ನು ಬಿಡುಗಡೆ ಮಾಡಲಾಗುತ್ತಿದೆ. ಹಾಗೂ ಸಕಾಲದಲ್ಲಿ ನಿಧನದ ವಾರ್ತೆ ತಲುಪಿದಲ್ಲಿ ಸರ್ಕಾರದ ಪರವಾಗಿ ಸಂಬಂಧಪಟ್ಟ

ತಹಶೀಲ್ದಾರ್‌ರವರು ಸ್ವಾತಂತ್ರ್ಯ ಯೋಧರ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸುತ್ತಾರೆ ಮತ್ತು ಪುಷ್ಪ ಹಾರ ಅರ್ಪಿಸಿ ಸರ್ಕಾರದ ಗೌರವ ಸೂಚಿಸುತ್ತಾರೆ.

6. ರಾಜ್ಯ ಗೌರವಧನ ಹೆಚ್ಚಳ: ಸ್ವಾತಂತ್ರ್ಯ ಯೋಧರಿಗೆ ನೀಡುತ್ತಿರುವ ರಾಜ್ಯ ಗೌರವಧನವನ್ನು ದಿನಾಂಕ: 1-8-1992 ರಿಂದ ಅನ್ವಯವಾಗುವಂತೆ ಮಾಹೆಯಾನ ರೂ.400-00ಗಳಿಂದ ರೂ.500-00ರ ವರೆಗೆ ಹೆಚ್ಚಿಸಲಾಗಿದೆ. ಈ ಹೆಚ್ಚಳವು ಗೋವಾ ಚಳುವಳಿಗಾರರಿಗೆ ಅನ್ವಯಿಸುವುದಿಲ್ಲ.

ವಿಡಿಯೋ ಗೇಮ್ಸ್ ಮತ್ತು ವೀಡಿಯೋ ಪಾರ್ಲರ್‌ಗಳಿಗೆ ಲೈಸೆನ್ಸ್ ನೀಡುವಲ್ಲಿ ಸರ್ಕಾರದ ಧೋರಣೆ.

972(1163) ಶ್ರಿ.ಎ.ಕೆ.ಅನಂತಕೃಷ್ಣ(ಶಿವಾಜಿನಗರ):- ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವೀಡಿಯೋ ಗೇಮ್ಸ್ ಮತ್ತು ವೀಡಿಯೋ ಪಾರ್ಲರ್‌ಗಳಿಗೆ ಲೈಸೆನ್ಸ್ ನೀಡುವಲ್ಲಿ ಸರ್ಕಾರದ ಧೋರಣೆ ಏನು?

ಆ) ಅನಧಿಕೃತವಾಗಿ ಸ್ಥಾಪಿಸಿರುವ ಇಂತಹ ವೀಡಿಯೋ ಗೇಮ್ಸ್ ಮತ್ತು ವೀಡಿಯೋ ಪಾರ್ಲರ್‌ಗಳ ಕೇಂದ್ರಗಳನ್ನು ಸಕ್ರಮಗೊಳಿಸಲು ಅನುಸರಿಸುವ ಕ್ರಮಗಳೇನು?

ಇ) ವೀಡಿಯೋ ಪಾರ್ಲರ್‌ಗಳು ಶಾಲಾ ಪ್ರದೇಶಗಳಲ್ಲಿ ಮತ್ತು ವಾಸದ ಮನೆಯ ವಲಯಗಳಲ್ಲಿ ಇರುವುದು ನಿಜವೇ.

ಈ) ಇವುಗಳ ವಿರುದ್ಧ ಸಾರ್ವಜನಿಕರು ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ವೀಡಿಯೋ ಪಾರ್ಲರ್‌ಗಳನ್ನು ಮುಚ್ಚಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರಿ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) ವೀಡಿಯೋ ಗೇಮ್ಸ್‌ಗಳಿಗೆ ಕರ್ನಾಟಕ ಪೋಲೀಸ್ ಕಾಯಿದೆಯ ಅಡಿಯಲ್ಲಿ ರಚಿಸಿರುವ ನಿಯಮಾವಳಿಗಳ ಪ್ರಕಾರ ಲೈಸೆನ್ಸ್ ನೀಡಲಾಗುವುದು, ಹಾಗೂ ವೀಡಿಯೋ ಹಾಗೂ ವೀಡಿಯೋ ಪಾರ್ಲರ್‌ಗಳಿಗೆ ಕರ್ನಾಟಕ ವಿ.ಸಿ.ಆರ್. ಮುಖೇನ ದೂರದರ್ಶನ ಪರದೆಯ ಮೇಲೆ ಚಲನಚಿತ್ರ ಪ್ರದರ್ಶನ(ನಿಯಂತ್ರಣ) ನಿಯಮಗಳು 1984ರ ಅಡಿಯಲ್ಲಿ ಲೈಸೆನ್ಸ್ ನೀಡಲಾಗುವುದು.

ಆ) ಅನಧಿಕೃತವಾಗಿ ಸ್ಥಾಪಿಸುವ ಇಂತಹ ಕೇಂದ್ರಗಳನ್ನು ಸಕ್ರಮಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಬಗ್ಗೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಹೌದು.

ಈ) ಹೌದು.

ಉ) ವೀಡಿಯೋ ಪಾರ್ಲರ್‌ಗಳನ್ನು ಮುಚ್ಚಲು ಸದ್ಯ ಕಾನೂನಿನ ಪ್ರಕಾರ ಸಾಧ್ಯವಿಲ್ಲವಾದ್ದರಿಂದ